SCCH – 01
MVC No.2925/2025
PW1

**ಸಾಕ್ಷಿಗೆ ದಿನಾಂಕಃ 09.10.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ: ಅರ್ಜಿದಾರರ ಪರ ವಕೀಲರಾದ ಶ್ರೀ.ಎನ್.ಜಿ.ಬಿ ರವರಿಂದಃ**

1) ನಾನು ಈ ಪ್ರಕರಣದಲ್ಲಿ **1** ನೇ ಅರ್ಜಿದಾರಳಾಗಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಸಾಕ್ಷ್ಯಕ್ಕೆ ಬದಲಾಗಿ ನಾನು ಈ ದಿನ ನನ್ನ ಸಾಕ್ಷಿ ಪ್ರಮಾಣ ಪತ್ರವನ್ನು ಸಲ್ಲಿಸುತ್ತಿದ್ದೇನೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಅಂಶಗಳು ಸತ್ಯವಾಗಿರುತ್ತವೆ ಮತ್ತು ಅದನ್ನು ನಾನು ಓದಿ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿರುತ್ತೇನೆ. ಸದರಿ ಪ್ರಮಾಣ ಪತ್ರವನ್ನು ನನ್ನ ಹೇಳಿಕೆಗೆ ಅನುಸಾರವಾಗಿ ನಮ್ಮ ವಕೀಲರು ಸಿದ್ಧಪಡಿಸಿದ್ದಾರೆ.

2) ಪ್ರಥಮ ವರ್ತಮಾನ ವರದಿ ಹಾಜರುಪಡಿಸಿದ್ದು ಅದನ್ನು ನಿ.ಪಿ.1 ಎಂದು, ಪ್ರಥಮ ವರ್ತಮಾನವನ್ನು ನಿ.ಪಿ.2 ಎಂದು, ಅಪಘಾತ ಆದ ಸ್ಥಳದ ಪಂಚನಾಮೆಯನ್ನು ನಿ.ಪಿ.3 ಎಂದು, ಕೃತ್ಯ ನಡೆದ ಸ್ಥಳದ ಕಚ್ಚಾ ನಕ್ಷೆಯನ್ನು ನಿ.ಪಿ.4 ಎಂದು, ಐ.ಎಂ.ವಿ ವರದಿಯನ್ನು ನಿ.ಪಿ.5 ಎಂದು, ಶವ ತನಿಖಾ ವರದಿಯನ್ನು ನಿ.ಪಿ.6 ಎಂದು, ಪಿ.ಎಮ್ ವರದಿಯನ್ನು ನಿ.ಪಿ.7 ಎಂದು ಮತ್ತು ಅಂತಿಮ ವರದಿಯನ್ನು ನಿ.ಪಿ.8 ಎಂದು ಗುರುತಿಸಿದೆ.

   **ಸೂಚನೆಃ** ನಿ.ಪಿ.1 ರಿಂದ ನಿ.ಪಿ.8 ಎಂದು ಗುರುತು ಆಗಿರುವ ದಾಖಲೆಗಳು ಮತ್ತೊಂದು ಪ್ರಕರಣದಿಂದ ಪಡೆದುಕೊಂಡಿರುವಂತಹ ಧೃಡೀಕೃತ ನಕಲುಗಳು ಆಗಿವೆ.

3) ಅಪಘಾತದಲ್ಲಿ ಮರಣ ಹೊಂದಿರುವ ವೆಂಕಟೇಶಪ್ಪನವರ ಆಧಾರ್ ಕಾರ್ಡ್, ಗುರುತಿನ ಚೀಟಿ ಮತ್ತು ಈ ಪ್ರಕರಣದ ಅರ್ಜಿದಾರರ ಆಧಾರ್ ಕಾರ್ಡ್

ಗಳನ್ನು ಮತ್ತು ಇದೇ ದಾಖಲೆಗಳ ಫೋಟೋ ಪ್ರತಿಗಳನ್ನು ಈ ಸಾಕ್ಷಿದಾರರು ಹಾಜರುಪಡಿಸಿದ್ದಾರೆ. ಸದರಿ ಮೂಲ ಪ್ರತಿಗಳನ್ನು ಮತ್ತು ಫೋಟೋ ಪ್ರತಿಗಳನ್ನು ಹೋಲಿಕೆ ಮಾಡಿ ನೋಡಲಾಗಿ ಈ ಮೂಲ ದಾಖಲೆಗಳನ್ನು ಆಧಾರವಾಗಿ ಇಟ್ಟುಕೊಂಡು ಯಾಂತ್ರಿಕ ಸಹಾಯದಿಂದ ಈ ಫೋಟೋ ಪ್ರತಿಗಳನ್ನು ಸಿದ್ಧಪಡಿಸಿದ್ದಾರೆ ಎಂದು ಕಂಡು ಬರುತ್ತದೆ. ಆದ ಕಾರಣದಿಂದ ಸದರಿ ಫೋಟೋ ಪ್ರತಿಗಳನ್ನು ನಿ.ಪಿ.**9** ರಿಂದ ನಿ.ಪಿ.**13** ಎಂದು ಗುರುತಿಸಿದೆ ಮತ್ತು ಮೂಲ ದಾಖಲೆಗಳನ್ನು ಈ ಸಾಕ್ಷಿದಾರರಿಗೆ ವಾಪಸ್ಸು ನೀಡಿದೆ.

4) ಅಪಘಾತದಲ್ಲಿ ಮರಣ ಹೊಂದಿರುವ ವೆಂಕಟೇಶಪ್ಪ ನವರ ಸಂಬಳದ ಚೀಟಿಗಳನ್ನು ನಿ.ಪಿ.**14,** ನಿ.ಪಿ.**15,** ನಿ.ಪಿ.**16,** ನಿ.ಪಿ.**17,** ನಿ.ಪಿ.**18,** ನಿ.ಪಿ.**19** ಮತ್ತು ನಿ.ಪಿ.**20** ಎಂದು ಗುರುತಿಸಿದೆ.

5) ವೆಂಕಟೇಶಪ್ಪ ರವರ ಬ್ಯಾಂಕ್ ಖಾತೆಯ ಸ್ಟೇಟ್ಮೆಂಟ್ ಹಾಜರುಪಡಿಸಿದ್ದು ಅದನ್ನು ನಿ.ಪಿ.**21** ಎಂದು ಗುರುತಿಸಿದೆ.

6) ಆದ ಕಾರಣದಿಂದ ಪ್ರಾರ್ಥನೆಯಂತೆ ನಮಗೆ ಪರಿಹಾರವನ್ನು ನೀಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

**ಪಾಟೀ ಸವಾಲು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ)

**(ಓ.ಹೇ.ಕೇ.ಸ.ಇ)**

**ಮುಖ್ಯ ನ್ಯಾಯಾಧೀಶರು,**
ಲಘು ವ್ಯವಹಾರಗಳ ನ್ಯಾಯಾಲಯ,
ಬೆಂಗಳೂರು.